ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂ:ಉ.ಕೃ.ನಿ/ರೈ.ಸಂ.ಕೇ & ತ/ಮಾರ್ಗಸೂಚಿ/2021-22

ಕೃಷಿ ಆಯುಕ್ತಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು-01
ದಿನಾಂಕ:05.04.2021

ಟಿಪ್ಪಣಿ

ವಿಷಯ: 2021-22ನೇ ಸಾಲಿನ "ಕಾರ್ಯಕ್ರಮಗಳ ಮಾರ್ಗಸೂಚಿ " ಪುಸ್ತಕವನ್ನು ಮುದ್ರಿಸಲು ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ: 1)ಕೃಷಿ ನಿರ್ದೇಶಕರ ಟಿಪ್ಪಣಿ ಸಂ:ಕೃವಾವಿ-ತಾಂ2/ಇಕಾಮಾಸೂ/2021-22 ದಿನಾಂಕ:31.03.2021.

2)ಯೋಜನಾ ವಿಭಾಗದ ಟಿಪ್ಪಣಿ ಸಂ:ಪಿಎಲ್ಎನ್/ತಾಂ-1/ಚಾ.ಯೋ/2021-22 ದಿನಾಂಕ:16.03.2021

******

ಮೇಲ್ಕಂಡ ವಿಸಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಯೋಜನಾ ವಿಭಾಗದ ಟಿಪ್ಪಣಿಯಲ್ಲಿರುವಂತೆ 2021-22ನೇ ಸಾಲಿನ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಆಯವ್ಯಯ ಅಂದಾಜುಗಳ ಮೂಲಕ (ಸಂಪುಟ-3) ರಾಜ್ಯವಲಯ ಚಾಲ್ತಿ ಯೋಜನೆಗಳಿಗೆ ಮತ್ತು ಹೊಸ ಕಾರ್ಯಕ್ರಮಗಳಿಗೆ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ. ಈ ಅನುದಾನವನ್ನು ವಿವಿಧ ಯೋಜನೆಗಳಡಿ ಲೆಕ್ಕ ಶೀರ್ಷಿಕೆವಾರು, ಉಪಶೀರ್ಷಿಕೆವಾರು, ಕಾರ್ಯಕ್ರಮವಾರು ಮರುಹಂಚಿಕೆ ಮಾಡಿ ಅನುಬಂಧದಲ್ಲಿ ನಿಗಧಿಪಡಿಸಲಾಗಿರುತ್ತದೆ. ಸದರಿ ಯೋಜನೆಗಳ ಜಿಲ್ಲಾವಾರು ಆರ್ಥಿಕ ಮತ್ತು ಭೌತಿಕ ಗುರಿಗಳ ಹಾಗೂ ಕಾರ್ಯಕ್ರಮಗಳ ಮಾಹಿತಿಯನ್ನು ಸಿದ್ದಪಡಿಸಿ ಕಳುಹಿಸಿದೆ.

ಅಪರ ಕೃಷಿ ನಿರ್ದೇಶಕರು
ಮಾನವ ಸಂಪನ್ಮೂಲ ಅಭಿವೃದ್ಧಿ

ಇವರಿಗೆ,

ಉಪ ಕೃಷಿ ನಿರ್ದೇಶಕರು
ಕೃಷಿ ವಾರ್ತಾ ವಿಭಾಗ

**ಕಟ್ಟಡ ವೆಚ್ಚಗಳು ಲೆಕ್ಕ ಶೀರ್ಷಿಕೆಃ 2401-00-001-1-01 ಉಪ ಲೆಕ್ಕ ಶೀರ್ಷಿಕೆ :071**

2021-22 ನೇ ಸಾಲಿನ ಕೃಷಿ ನಿರ್ದೇಶನಾಲ**ಯ** ಯೋಜನೆ (ಲೆಕ್ಕ ಶೀರ್ಷಿಕೆ :2401-00-00-1-01, ಉಪ ಲೆಕ್ಕ ಶೀರ್ಷಿಕೆ:071) ಕಟ್ಟಡ ವೆಚ್ಚಗಳು ಅಡಿಯಲ್ಲಿ ರೂ.140.00 ಲಕ್ಷಗಳನ್ನು ಒದಗಿಸಲಾಗಿದ್ದು, ಅನುಬಂಧದಲ್ಲಿ ನಮೂದಿಸಿರುವಂತೆ ವಿವಿಧ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡಲಾಗಿದೆ.

ಕೃಷಿ ನಿರ್ದೇಶನಾಲಯ ಯೋಜನೆ ಅಡಿಯಲ್ಲಿ, ಉಪ ಲೆಕ್ಕ ಶೀರ್ಷಿಕೆ :071 - ಕಟ್ಟಡ ವೆಚ್ಚಗಳು ಅಡಿಯಲ್ಲಿ ತಮ್ಮ ಅಧೀನ ಕಛೇರಿಗಳ ಬಾಡಿಗೆಯನ್ನು ಪಾವತಿ ಮಾಡುವ ಸಲುವಾಗಿ ಈ ಪತ್ರದ ಅನುಬಂಧದಲ್ಲಿ ತೋರಿಸಿರುವಂತೆ ಎಲ್ಲಾ 30 ಜಿಲ್ಲೆಗಳಿಗೆ ಒದಗಿಸಲಾಗಿದೆ .ಕೇಂದ್ರ ಕಛೇರಿಯ ಲೆಕ್ಕ ಶಾಖೆಯಿಂದ ಕಾಲಕಾಲಕ್ಕೆ ಬಿಡುಗಡೆ ಮಾಡುವ ಅನುದಾನವನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು ಕಛೇರಿ ಕಟ್ಟಡ ಬಾಡಿಗೆ, ರೈತ ಸಂಪರ್ಕ ಕೇಂದ್ರಗಳ ಕಟ್ಟಡ ಬಾಡಿಗೆ ಮತ್ತು ಇತರೆ ಸಂಬಂಧಿತ ವೆಚ್ಚಗಳು ಅಂದರೆ ತೆರಿಗೆ ಮತ್ತು ಶುಲ್ಕಗಳ ಸಂದಾಯಕ್ಕೆ ಬಳಸಲು ಅನುಮತಿಸಿದೆ.

1. ಬಾಡಿಗೆಯನ್ನು ಸಕ್ರಮ ಪ್ರಾಧಿಕಾರಿಯವರಿಂದ ಮಂಜೂರಾತಿ ಪಡೆದು ಪಾವತಿ ಮಾಡತಕ್ಕದು.
2. ಪ್ರತಿ ಕಟ್ಟಡದ ಬಾಡಿಗೆ ಸಂದಾಯ ಕುರಿತು ವೆಚ್ಚದ ವಹಿಯನ್ನು ನಿರ್ವಹಿಸತಕ್ಕದು.
3. ಒಂದು ವರ್ಷಕ್ಕಿಂತ ಹಿಂದಿನ ಅವಧಿಗೆ ಬಾಡಿಗೆಯನ್ನು ಪಾವತಿ ಮಾಡಲು ವಿಳಂಬ ವಿನಾಯ ಆದೇಶವನ್ನು ಪಡೆದಿರಬೇಕು /ಸುತ್ತೋಲೆ ಸಂಖ್ಯೆ:ರೈ.ಸಂ.ಕೇ/ತಾ-2/ಸ.ಕೃ.ನಿ.ಬಾ/09-10/405, ದಿನಾಂಕ:29-10-2009 ರ ಪ್ರಕಾರ ಕ್ರಮಕೈಗೊಳ್ಳುವುದು.

ಬಾಡಿಗೆ ಪಾವತಿ ಮಾಡಿದ ನಂತರ ಈ ಬಗ್ಗೆ ಪೂರ್ಣ ಮಾಹಿತಿಯುಳ್ಳ ವರದಿಯನ್ನು ಕೇಂದ್ರ ಕಛೇರಿಯ, ಮುಖ್ಯ ಲೆಕ್ಕಾಧಿಕಾರಿಗಳು, ಲೆಕ್ಕ ವಿಭಾಗ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು .ಒಂದು ವೇಳೆ ಜಿಲ್ಲಾ ಪಂಚಾಯ್ತಿ ವತಿಯಿಂದ ಕಛೇರಿಗಳ ಬಾಡಿಗೆಗಾಗಿ ಅನುದಾನವನ್ನು ಬಿಡುಗಡೆ ಮಾಡಿದ್ದಲ್ಲಿ ಇಲಾಖೆಯ ವತಿಯಿಂದ ಬಿಡುಗಡೆ ಮಾಡಿರುವ ಅನುದಾನವನ್ನು ಅದ್ಯರ್ಪಣೆ ಮಾಡತಕ್ಕದ್ದು .ಜಿಲ್ಲಾ ಪಂಚಾಯ್ತಿಗಳಿಂದ ಈ ಹಿಂದೆ ಬಾಡಿಗೆ ಪಾವತಿ ಮಾಡಿದ್ದಲ್ಲಿ ಯಾವ ಅವಧಿಯವರೆಗೆ ಬಾಡಿಗೆಯನ್ನು ಪಾವತಿ ಮಾಡಲಾಗಿದೆ ಎಂಬ ಮಾಹಿತಿಯನ್ನು ನೀಡತಕ್ಕದ್ದು.

ಸೂಚನೆಃ

- ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ಕಟ್ಟಡದಲ್ಲಿ ರೈತ ಸಂಪರ್ಕ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅಂತಹ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಿಗೆ ಈ ಘಟಕದಡಿ ಹೆಚ್ಚಿನ ಅನುದಾನವನ್ನು ನೀಡಿರುವುದರಿಂದ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ವೆಚ್ಚದಲ್ಲಿ ರೈತ ಸಂಪರ್ಕ ಕೇಂದ್ರದ ನಿರ್ವಹಣಾ ವೆಚ್ಚವನ್ನು ಸಹ ಬರಿಸಬಹುದು.
- ಈ ಯೋಜನೆಯಡಿ ಬಿಡುಗಡೆಯಾಗುವ ತ್ರೈಮಾಸಿಕ ಅನುದಾನವನ್ನು ಆಯಾ ತ್ರೈಮಾಸಿಕದಲ್ಲೇ ಪೂರ್ಣ ವೆಚ್ಚ ಮಾಡುವುದು .ಇಲ್ಲವಾದಲ್ಲಿ ಮುಂದಿನ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ .

**ಕೃಷಿ ನಿರ್ದೇಶನಾಲಯ ಯೋಜನೆ ಮಾಸಿಕ ಪ್ರಗತಿ ವರದಿ**

**ಲೆಕ್ಕ ಶೀರ್ಷಿಕೆ 2401-00-001-1-01 ಕೃಷಿ ನಿರ್ದೇಶನಾಲಯ ಯೋಜನೆ**

**(ಉಪ ಲೆಕ್ಕ ಶೀರ್ಷಿಕೆ 071) ಜಮೀನು ಮತ್ತು ಕಟ್ಟಡಗಳು**

ಜಿಲ್ಲೆ: ತಿಂಗಳ ವರದಿ----------

ಆರ್ಥಿಕ: ಲಕ್ಷ ರೂ.ಗಳಲ್ಲಿ

| ಸಂ | ಘಟಕಗಳು | ವಾರ್ಷಿಕ ಗುರಿ | ಹಿಂದಿನ ತಿಂಗಳವರೆಗಿನ | | ಈ ತಿಂಗಳ ಸಾಧಿಸಿದ ಪ್ರಗತಿ | | ಒಟ್ಟು ಪ್ರಗತಿ | | ಷರಾ |
|---|---|---|---|---|---|---|---|---|---|
| | | | ಗುರಿ | ಸಾಧನೆ | ಗುರಿ | ಸಾದನೆ | ಗುರಿ | ಸಾಧನೆ | |
| 1 | 071-<br>ಜಮೀನು ಮತ್ತು ಕಟ್ಟಡಗಳು | | | | | | | | |

ವಿ.ಸೂ .ಯಾವುದೇ ಘಟಕದಲ್ಲಿ ಸಾಧಿಸಿದ ಪ್ರಗತಿ ಪ್ರತಿಶತ 75 ಕ್ಕಿಂತ ಕಡಿಮೆ ಇದ್ದರೆ ಷರಾ ಕಾಲಂನಲ್ಲಿ ವಿವರಣೆ ಕಡ್ಡಾಯವಾಗಿ ನೀಡಬೇಕು.

**2021-22ನೇ ಸಾಲಿನ ಕೃಷಿ ಆಯುಕ್ತಾಲಯ) ಯೋಜನೆ (ಲೆಕ್ಕ ಶೀರ್ಷಿಕೆ 2401-00-001-1-01,**

**ಉಪ ಲೆಕ್ಕ ಶೀರ್ಷಿಕೆ :071-)ಕಟ್ಟಡ ವೆಚ್ಚಗಳು ಅನುದಾನ ಹಂಚಿಕೆ ಪಟ್ಟಿ ಆರ್ಥಿಕ-ಲಕ್ಷ ಗಳಲ್ಲಿ(ಆರ್ಥಿಕ-ಲಕ್ಷ ಗಳಲ್ಲಿ)**

| ಕ್ರ. ಸಂ | ಜಿಲ್ಲೆ | ಉಕೃನಿ ಕಛೇರಿ (1&2) | ತಾಲ್ಲೂಕು ಸಂಖ್ಯೆ | ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ | ಕಟ್ಟಡ ವೆಚ್ಚಗಳು, ಬಾಡಿಗೆ | ತೆರಿಗೆ ಮತ್ತು ಶುಲ್ಕಗಳ ಸಂದಾಯ ವೆಚ್ಚ | ಸ.ಕೃ.ನಿ ಕಛೇರಿಗಳಲ್ಲಿ ಇರುವ ರೈ.ಸಂ.ಕೇ.ಗಳ ನಿರ್ವಹಣಾ ವೆಚ್ಚ | | ಒಟ್ಟು ಅನುದಾನ |
|---|---|---|---|---|---|---|---|---|---|
| | | | | | (ಬಾಡಿಗೆ ಕಟ್ಟಡಗಳಲ್ಲಿರುವ ಕಛೇರಿಗಳಿಗೆ ಮಾತ್ರ | | ಸ.ಕೃ.ನಿ ಕಛೇರಿಗಳಲ್ಲಿ ಇರುವ ರೈ.ಸಂ.ಕೇ. ಗಳ ಸಂ. | ಸ.ಕೃ.ನಿ ಕಛೇರಿಗಳಲ್ಲಿ ಇರುವ ರೈ.ಸಂ.ಕೇ. ಗಳ ನಿರ್ವಹಣಾ ವೆಚ್ಚ . | |
| 1 | ಬಾಗಲಕೋಟೆ | 2 | 6 | 18 | 2.00 | 2.25 | 0 | 0.00 | 5.92 |
| 2 | ಬೆಂಗಳೂರು (ಗ್ರಾ) | 1 | 4 | 17 | 1.00 | 1.50 | 2 | 0.36 | 1.86 |
| 3 | ಬೆಂಗಳೂರು (ನ) | 0 | 2 | 11 | 0.67 | 0.50 | 1 | 0.18 | 0.68 |
| 4 | ಬೆಳಗಾವಿ | 2 | 10 | 35 | 0.93 | 3.25 | 3 | 0.54 | 4.72 |
| 5 | ಬಳ್ಳಾರಿ | 2 | 7 | 31 | 1.07 | 2.50 | 3 | 0.54 | 4.11 |
| 6 | ಬೀದರ್ | 2 | 5 | 30 | 0.31 | 4.00 | 0 | 0.00 | 4.00 |
| 7 | ವಿಜಯಪುರ | 2 | 5 | 20 | 1.00 | 2.00 | 0 | 0.00 | 2.00 |
| 8 | ಚಾಮರಾಜನಗರ | 1 | 4 | 16 | 0.50 | 1.50 | 3 | 0.54 | 2.54 |
| 9 | ಚಿಕ್ಕಬಳ್ಳಾಪುರ | 2 | 6 | 26 | 2.00 | 1.25 | 3 | 0.54 | 5.10 |
| 10 | ಚಿಕ್ಕಮಗಳೂರು | 2 | 7 | 34 | 1.98 | 2.50 | 3 | 0.54 | 5.02 |
| 11 | ಚಿತ್ರದುರ್ಗ | 2 | 6 | 22 | 3.16 | 2.25 | 0 | 0.00 | 5.41 |
| 12 | ದಕ್ಷಿಣ ಕನ್ನಡ | 2 | 5 | 17 | 0.84 | 1.75 | 2 | 0.36 | 2.95 |
| 13 | ದಾವಣಗೆರೆ | 2 | 6 | 20 | 3.70 | 2.25 | 2 | 0.36 | 6.31 |
| 14 | ಧಾರವಾಡ | 2 | 5 | 14 | 2.00 | 2.00 | 1 | 0.18 | 4.18 |

| | | | | | | | | | |
|---|---|---|---|---|---|---|---|---|---|
| 15 | ಗದಗ | 2 | 5 | 11 | 1.99 | 2.00 | 2 | 0.36 | 4.35 |
| 16 | ಕಲಬುರಗಿ | 2 | 7 | 32 | 3.82 | 3.00 | 3 | 0.54 | 7.36 |
| 17 | ಹಾಸನ | 2 | 8 | 38 | 1.37 | 2.75 | 2 | 0.36 | 4.48 |
| 18 | ಹಾವೇರಿ | 2 | 7 | 19 | 6.00 | 2.50 | 1 | 0.18 | 8.68 |
| 19 | ಕೊಡಗು | 1 | 3 | 16 | 2.12 | 1.25 | 1 | 0.18 | 3.55 |
| 20 | ಕೋಲಾರ | 2 | 5 | 27 | 3.00 | 2.00 | 3 | 0.54 | 5.54 |
| 21 | ಕೊಪ್ಪಳ | 1 | 4 | 20 | 1.39 | 1.50 | 1 | 0.54 | 3.43 |
| 22 | ಮಂಡ್ಯ | 2 | 7 | 31 | 5.39 | 2.5 | 1 | 0.18 | 8.07 |
| 23 | ಮೈಸೂರು | 2 | 7 | 33 | 1.02 | 2.50 | 3 | 0.54 | 4.06 |
| 24 | ರಾಯಚೂರು | 2 | 5 | 37 | 2.00 | 2.00 | 0 | 0.00 | 4.00 |
| 25 | ರಾಮನಗರ | 1 | 4 | 18 | 3.80 | 1.50 | 3 | 0.54 | 5.84 |
| 26 | ಶಿವಮೊಗ್ಗ | 2 | 7 | 39 | 0.84 | 3.58 | 2 | 0.36 | 4.78 |
| 27 | ತುಮಕೂರು | 2 | 10 | 50 | 1.20 | 3.25 | 6 | 1.08 | 5.53 |
| 28 | ಉಡುಪಿ | 1 | 3 | 9 | 3.22 | 1.25 | 2 | 0.36 | 4.83 |
| 29 | ಉತ್ತರ ಕನ್ನಡ | 2 | 11 | 35 | 0.70 | 2.25 | 9 | 1.32 | 3.57 |
| 30 | ಯಾದಗಿರಿ | 1 | 3 | 16 | 5.00 | 1.25 | 1 | 0.18 | 7.13 |
| | **ಒಟ್ಟು** | **51** | **174** | **742** | **64.02** | **64.58** | **63** | **11.40** | **140.00** |

ಅಪರ ಕೃಷಿ ನಿರ್ದೇಶಕರು
ಮಾನವ ಸಂಪನ್ಮೂಲ ಅಭಿವೃದ್ಧಿ

**ರೈತ ಸಂಪರ್ಕ ಕೇಂದ್ರಗಳು**

ಉದ್ದೇಶ:

1. ಬೆಳೆ ಆಯ್ಕೆ, ಬೆಳೆ ಉತ್ಪಾದನಾ ಕಾರ್ಯಕ್ರಮಗಳು ಮಾರುಕಟ್ಟೆ ಮಾಹಿತಿ ಇವೆ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ಆಧುನಿಕ ಮಾಹಿತಿ ನೀಡುವುದು.
2. ಕೃಷಿ ಪರಿಕರಗಳಾದ ಬೀಜ ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮುಂತಾವುಗಳನ್ನು ಸ್ಥಳೀಯವಾಗಿ ಒದಗಿಸಲು ಸಂಯೋಜನೆ ಮಾಡುವುದು
3. ಬೀಜ ಮೊಳಕೆ ಮತ್ತು ಗುಣಮಟ್ಟ ಪರೀಕ್ಷೆ, ಮಣ್ಣು ಪರೀಕ್ಷೆ ಇತ್ಯಾದಿ ಮೂಲ ಪರೀಕ್ಷಾ ಸೌಲಭ್ಯಗಳನ್ನು ಸ್ಥಳೀಯವಾಗಿ ಒದಗಿಸುವುದು.
4. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಬಿತ್ತನೆ ಮತ್ತು ಇತರ ಪರಿಕರಗಳ (ತಾಂತ್ರಿಕತೆಗಳು) ಪ್ರಾತ್ಯಕ್ಷಿಕೆಗಾಗಿ ಸೌಲಭ್ಯ ಒದಗಿಸುವುದು.
5. ಸಾರ್ವಜನಿಕ ಮತ್ತು ಖಾಸಗಿ ರಂಗಗಳ ತಂತ್ರಜ್ಞಾನ ಮತ್ತು ಪರಿಕರಗಳ ತುಲನೆ/ಪರಿಶೀಲನೆಗೆ ಅವಕಾಶ ಒದಗಿಸುವುದು.

ರೈತ ಸಂಪರ್ಕ ಕೇಂದ್ರಗಳು ಎಲ್ಲಾ ಕಛೇರಿ ದಿವಸಗಳಂದು ಕಛೇರಿ ವೇಳೆಯಲ್ಲಿ (ಬೆಳಗ್ಗೆ 10.00 ಘಂಟೆಯಿಂದ ಸಂಜೆ 5.30 ಘಂಟೆವರೆಗೆ) ಕಾರ್ಯ ನಿರ್ವಹಿಸತಕ್ಕದ್ದು.ಕಛೇರಿ ವೇಳೆಯಲ್ಲಿ ಯಾವುದೇ ಕಾರಣಕ್ಕೂ ರೈತ ಸಂಪರ್ಕ ಕೇಂದ್ರಗಳ ಬಾಗಿಲು ಮುಚ್ಚಿರಕೂಡದು. ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರದಲ್ಲಿ ಕಛೇರಿ ವೇಳೆಯಲ್ಲಿ ಸದಾ ಹಾಜರಿದ್ದು, ಭೇಟಿ ನೀಡುವ ರೈತರಿಗೆ ಅವಶ್ಯಕ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು ಹಾಗೂ ಕೇಂದ್ರದಲ್ಲಿ ಸುವ್ಯವಸ್ಥೆ ಕಾಪಾಡಿಕೊಳ್ಳಬೇಕು.

**ತಾಲ್ಲೂಕು ಸಹಾಯಕ ಕೃಷಿ ನಿದೇಶಕರು:**

1. ಕೇಂದ್ರವಾರು ನಿಯೋಜಿಸಲಾದ ಸಹಾಯಕ ಕೃಷಿ ಅಧಿಕಾರಿ ಒಬ್ಬರನ್ನು ಕೇಂದ್ರದ ದಿನತಿತ್ಯದ ಮೇಲ್ವಚಾರಣೆಗೆ ಖಾಯಂ ಆಗಿ ನಿಯೋಜಿಸಬೇಕು.

2. ಹಾಗೂ ಇನ್ನುಳಿದ ಸಹಾಯಕ ಕೃಷಿ ಅಧಿಕಾರಿಗಳು ಗ್ರಾಮ ಪಂಚಾಯತಿಯನ್ನು ಘಟಕವಾಗಿರಿಸಿಕೊಂಡು ಕಾರ್ಯವ್ಯಾಪ್ತಿ ನಿಗದಿಪಡಿಸಬೇಕು.

3. ಸಹಾಯಕ ಕೃಷಿ ನಿರ್ದೇಶಕರು ಸೇರಿದಂತೆ ಎಲ್ಲಾ ವಿಸ್ತರಣಾ ಅಧಿಕಾರಿ / ಕಾರ್ಯಕರ್ತರು ನಿಗದಿತ ಕೇಂದ್ರ ಸ್ಥಾನದಲ್ಲಿ ಕಡ್ಡಾಯವಾಗಿ ವಾಸವಾಗಿರುವಂತೆ ಕ್ರಮವಹಿಸಬೇಕು.

ಕೇಂದ್ರಕ್ಕೆ ಭೇಟಿ ನೀಡುವ ರೈತರ ವಿವರಗಳನ್ನು ರೈತ ಸಂಪರ್ಕ ಸ್ಪಂದನ ವಹಿಯಲ್ಲಿ ದಾಖಲಿಸಿ ರೈತರಿಗೆ ಮಾಹಿತಿ ನೀಡಬೇಕು.ವಹಿಗಳ ಕಾಲಂಗಳು ಈ ಕೆಳಗಿನಂತಿರಬೇಕು.

| ಕ್ರ. ಸಂ. | ರೈತರ ಹೆಸರು /ವಿಳಾಸ | ಸಮಸ್ಯೆ | ಸಲಹೆ | ರೈತರ ರುಜು |
|---|---|---|---|---|
| 1 | | | | |
| 2 | | | | |

ಸದರಿ ವಹಿಯಲ್ಲಿ ಪ್ರತಿ ದಿವಸದ ಪ್ರಾರಂಭದಲ್ಲಿ ಆ ದಿನದ ದಿನಾಂಕವನ್ನು ಕೆಂಪು ಶಾಯಿಯಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. ರೈತರಿಗೆ ಸಲಹೆಗಳನ್ನು ಸಲಹಾ ಚೀಟಿಯಲ್ಲಿ ಸ್ಪಷ್ಟವಾಗಿ ಈ ಮೇಲಿನ ವಹಿಯಲ್ಲಿ ನಮೂದಿಸಿದಂತೆಯೇ ಬರೆದುಕೊಡತಕ್ಕದ್ದು. ಸಲಹಾ ಚೀಟಿಯ ನಮೂನೆಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಕ್ರಮ ಸಂಖ್ಯೆಯನ್ನು ಪ್ರತಿ ಮಾಹೆಗೆ ಒಂದು ಸಲ ಬದಲಿಸಬೇಕು.

ಸಂತೆಯ ದಿವಸಗಳಂದು ಎಲ್ಲಾ ಸಹಾಯಕ ಕೃಷಿ ಅಧಿಕಾರಿಗಳು ಮತ್ತು ಕೃಷಿ ಅಧಿಕಾರಿಗಳು ಹಾಗೂ ತೋಟಗಾರಿಕೆ, ಪಶು ವೈದ್ಯಕೀಯ, ರೇಷ್ಮೆ, ಮೀನುಗಾರಿಕೆ ಇವೇ ಮುಂತಾದ ಕೃಷಿ ಸಂಬಂಧಿತ ಇಲಾಖೆಗಳ ತಾಂತ್ರಿಕ ಸಿಬ್ಬಂದಿಯವರು ( ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಸಂಯೋಜನೆಯೊಂದಿಗೆ ಏರ್ಪಾಡು ಮಾಡಬೇಕು) ಕೇಂದ್ರದಲ್ಲಿ ಹಾಜರಿದ್ದು ರೈತರಿಗೆ ಮಾಹಿತಿ ನೀಡಬೇಕು.

ಕೃಷಿ ಅಧಿಕಾರಿಗಳು ಮತ್ತು ಸಹಾಯಕ ಕೃಷಿ ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಯ ರೈತರ ಮತ್ತು ಗ್ರಾಮಗಳ ಸಂಖ್ಯೆಯನ್ನಾಧರಿಸಿ ನಿಯತವಾಗಿ ಗುಂಪುವಾರು ಭೇಟಿ ಕಾರ್ಯಕ್ರಮದನ್ವಯ ಕ್ಷೇತ್ರ ಭೇಟಿ, ವಿಸ್ತರಣಾ ಕಾರ್ಯ ಹಾಗೂ ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ಪಾಕ್ಷಿಕ ತರಬೇತಿಯ ಕಾಲಕ್ಕೆ ಸಜೀವ ಮಾದರಿಗಳೊಂದಿಗೆ ಮಾಹಿತಿಯನ್ನು ನೀಡುವುದಲ್ಲದೆ ಪಡೆದ ಪರಿಹಾರಗಳನ್ನು ರೈತರಿಗೆ ನೀಡಬೇಕು.

ಕೇಂದ್ರಗಳಲ್ಲಿ ಮಾಹಿತಿ ವಿಸ್ತರಣೆ ಹಾಗೂ ಪ್ರದರ್ಶನದೊಂದಿಗೆ ಅಚ್ಚುಕಟ್ಟುತನ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಬೇಕು.ಕೇಂದ್ರಗಳಲ್ಲಿ ಸ್ವಚ್ಛತೆ ಮತ್ತು ನೀರಿನ ವ್ಯವಸ್ಥೆ, ನೀರಿನ ಶುಲ್ಕ, ವಿದ್ಯುತ್ ಶುಲ್ಕ, ಸಣ್ಣ ದುರಸ್ತಿ (ಇಲಾಖೆಯ ಕಟ್ಟಡಗಳಲ್ಲಿ ಮಾತ್ರ) ಮತ್ತು ದೂರವಾಣಿ ವೆಚ್ಚಗಳಿಗಗಿ ಲೆಕ್ಕ ಶೀರ್ಷಿಕ 2401-00-001-1-01 ಕೃಷಿ ನಿರ್ದೇಶನಾಲಯ ಯೋಜನೆ(ಉಪ ಲೆಕ್ಕ ಶೀರ್ಷಿಕೆ 071)ರಡಿ ಒದಗಿಸಲಾದ ಅನುದಾನನ್ನು ಉಪಯೋಗಿಸಬಹುದಾಗಿದೆ.

ಕೇಂದ್ರದಲ್ಲಿ ಈ ಕೆಳಕಾಣಿಸಿದ ಮಾಹಿತಿ ಒದಗಿಸುವ ದಾಖಲೆ/ಪಟ್ಟಿಗಳನ್ನು ಹಾಗೂ ಇಲಾಖೆಯ ವಿವಿಧ ಸುತ್ತೋಲೆಗಳನ್ನು ತಿಳಿಸಿರುವ ಪ್ರಕಾರ ದಾಖಲೆ /ವಹಿಗಳನ್ನು ವ್ಯವಸ್ಥಿತವಾಗಿ ಇರಿಸಿ ಪ್ರದರ್ಶಿಸತಕ್ಕದ್ದು.

1. ಜಿಲ್ಲೆ, ತಾಲ್ಲೂಕು ಹಾಗೂ ಹೋಬಳಿ ನಕಾಶೆ.
2. ಹೋಬಳಿಯ ಸಾಮಾನ್ಯ ಮಾಹಿತಿ
3. ರೈತರ ಸ್ಪಂದನವಹಿ
4. ಹಾಜರಿ ಪುಸ್ತಕ
5. ಮೇಲಾಧಿಕಾರಿಗಳ ಭೇಟಿ ಪುಸ್ತಕ
6. ರೈತ ಸಂಪರ್ಕ ಕೇಂದ್ರದ ಸಿಬ್ಬಂದಿಯ ಹೆಸರುಗಳ ಪಟ್ಟಿ
7. ಚಲನವಲನ ಪುಸ್ತಕ
8. ರೈತ ಸಂಪರ್ಕ ಕೇಂದ್ರಗಳ ಸಿಬ್ಬಂದಿಯ ಕಾರ್ಯವ್ಯಾಪ್ತಿ/ಕೇಂದ್ರ ಸ್ಥಾನ ಗುರುತಿಸುವ ನಕಾಶೆ
9. ಹೋಬಳಿಯ ಗ್ರಾಮವಾರು ಹಿಡುವಳಿಗಳ ಪಟ್ಟಿ
10. ಹೋಬಳಿಯ ಗ್ರಾಮವಾರು ಹಿಡುವಳಿಗಳ ಬೆಳೆವಾರು ಸಾಮಾನ್ಯ ಕ್ಷೇತ್ರ ಆವರಣ ವಿವರ ಹಾಗೂ ಮಳೆ ವಿವರ
11. ಹೋಬಳಿಯ ಗ್ರಾಮವಾರು ಹಿಡುವಳಿಗಳ ಬೆಳೆವಾರು ಕ್ಷೇತ್ರ ಆವರಣ ವಿವರ ( ಹಿಂದಿನ ಹತ್ತು ವರ್ಷಗಳ ವಿವರ)

12. ಬೆಳೆವಾರು, ತಳಿವಾರು ಬೀಜ, ರಸಗೊಬ್ಬರ, ಕೀಟನಾಶಕ, ಬೀಜೋಪಚಾರ ಔಷಧಿಗಳು, ಶಿಲೀಂದ್ರನಾಶಕ, ಕಳೆನಾಶಕ, ಸಾವಯವ ಕೀಟನಾಶಕಗಳು ಐ.ಪಿ.ಎಂ. ಸಾಮಾಗ್ರಿಗಳು, ಬೆಳೆ ಸಮಸ್ಯೆ ಕುರಿತು ಸಜೀವಮಾದರಿಗಳು ತಾಂತ್ರಿಕತೆಗಳ ಬಗ್ಗೆ ಸಮಗ್ರ ವಿವರಗಲನ್ನೊಳಗೊಂಡ ಮಾಹಿತಿ ಮುಂತಾದವುಗಳ ಮಾದರಿಗಳು.

13. ಇಲಾಖಾವಾರು ಭಿತ್ತಿ ಪತ್ರಗಳ ವ್ಯವಸ್ಥಿತ ಪ್ರದರ್ಶನ ( ಸಾಗುವಳಿ ಕ್ರಮ, ಸಾವಯವ ಕೃಷಿ, ಬೀಜ ರಸಗೊಬ್ಬರ ಸಮಗ್ರ ಪೀಡೆ ನಿರ್ವಹಣೆ ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಭಿತ್ತಿ ಪತ್ರಗಳು ಹಾಗೂ ಇಲಾಕೆಯ ಪ್ರಕಟಣೆಗಳು, ಉದಾ: ಕೃಷಿ ಪೇಟೆ, ಇತ್ಯಾದಿ)

14. ವಿವಿಧ ಬೆಳೆ ಉತ್ಪಾದನೆ ತಾಂತ್ರಿಕತೆಗಳ ಹಸ್ತಪ್ರತಿಗಳು

15. ಬೀಜ ಮೊಳಕೆ ಪರೀಕ್ಷಾ ಸಲಕರಣೆಗಳು ಹಾಗೂ ಸಂಬಂಧಿಸಿದ ವಹಿ

16. ರಸಗೊಬ್ಬರ ಹಾಗೂ ಕೀಟನಾಶಕ ಮಾದರಿ ವಿಶ್ಲೇಷಣೆಗೆ ಸಂಬಂಧಿಸಿದ ಸಲಕರಣೇಗಳು ಹಾಗೂ ವಹಿಗಳು

17. ಕೃಷಿ ಪರಿಕರ ಮಾರಾಟ (ಸರ್ಕಾರಿ ಹಾಗೂ ಖಾಸಗಿ) ಮಳಿಗೆಗಳ ಪಟ್ಟಿ (ಲೈಸೆನ್ಸ್ ವಿವರಗಳೊಂದಿಗೆ)

18. ರೈತ ಸಂಪರ್ಕ ಕೇಂದ್ರದಲ್ಲಿರುವ ಫಲಕದ ಮೇಲೆ ಚಾಲ್ತಿ ಪಾಕ್ಷಿಕದ ಮಹತ್ವದ ಸಂದೇಶಗಳನ್ನು ಮತ್ತು ನಿನ್ನೆಯ ಪೇಟೆ ಧಾರಣೆಗಳು ಶೀರ್ಷಿಕೆ ಅಡಿಯಲ್ಲಿ ಪ್ರಮುಖ ಕೃಷಿ ಉತ್ಪನ್ನಗಳ ಬೆಲೆಗಳನ್ನು ದೈನಿಕ ಪತ್ರಿಕೆಗಳಿಂದ ಪಡೆದು ಬರೆಯತಕ್ಕದ್ದು.(ನಮೂನೆ ಅನುಬಂಧ -2 ರಲ್ಲಿರುವಂತೆ)

19. ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಕ್ರಮವಾಗಿ ಮಾಹೆ ಮತ್ತು ದ್ವೈಮಾಸಿಕದಲ್ಲಿ ಕನಿಷ್ಟ ಒಂದು ಬಾರಿ ಕೇಂದ್ರವನ್ನು ಸಂದರ್ಶಿಸಿ ನ್ಯೂನತೆಗಳನ್ನು ಸರಿಪಡಿಸಲು ಸಂದರ್ಶನವಹಿಯಲ್ಲಿ ಸ್ಪಷ್ಟ ಮಾರ್ಗದರ್ಶನ ನೀಡತಕ್ಕದ್ದು.

20. ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಕೆಲವೊಂದು ವಹಿಗಳನ್ನು ನಿರ್ವಹಿಸಬೇಕಾಗಿದ್ದು ವಿವರಳನ್ನು ಅನುಬಂಧ-3 ರಲ್ಲಿ ನೀಡಿದೆ.

ರೈತ ಸಂಪರ್ಕ ಕೇಂದ್ರಗಳ ಪ್ರಗತಿಯ ವಿವರಗಳನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರು ಪ್ರತಿ ತಿಂಗಳು ದಿನಾಂಕ: 5 ರೊಳಗಾಗಿ ಕೇಂದ್ರ ಕಛೇರಿಗೆ ಕಳುಹಿಸಬೇಕು. ಎಲ್ಲಾ ರೈತ ಸಂಪರ್ಕ ಕೇಂದ್ರಗಳ ಪ್ರಗತಿಯ ವಿವರಗಳನ್ನು ಪಡೆದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ದಿನಾಂಕ 5 ರೊಳಗಾಗಿ ಪ್ರತಿ ತಿಂಗಳೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರಿಗೆ ತಲುಪಿಸತಕ್ಕದ್ದು. ಪ್ರಗತಿ ನಮೂನೆಯನ್ನು ಅನುಬಂಧ-4 ರಲ್ಲಿ ನೀಡಿದೆ.

## ಅನುಬಂಧ-3

ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ನಿರ್ವಹಿಸತಕ್ಕ ವಹಿಗಳು.

1.ದಿನಚರಿ

2. ದಾಸ್ತಾನು ವಹಿ (ಜಡವಸ್ತು)

3. ದಾಸ್ತಾನು ವಹಿ (ತಾಂತ್ರಿಕ)

4. ಮಣ್ಣು ಪರೀಕ್ಷೆ ಅನುಸರಣೆ

5. ಪ್ರಾತ್ಯಕ್ಷಿಕೆ ( ಕಿರುಚೀಲ ಪ್ರಾತ್ಯಕ್ಷಿಕೆ ಸಹಿತ)

6.ಬೆಳೆ ಕಟಾವು ಪ್ರಯೋಗಗಳ ವಿವರಗಳು

7. ಇಲಾಖಾ ಕಾರ್ಯಕ್ರಮಗಳ ಮಾರ್ಗಸೂಚಿಗಳು.

8. ಪಾಕ್ಷಿಕ ತರಬೇತಿ ನಡವಳಿಗಳು

9. ಹಾಜರಾತಿ ಮಾಹಿತಿ ಕಡತ

10. ಮೇಲಾಧಿಕಾರಿಗಳಿಂದ ಬಂದ ಪತ್ರಗಳು ಹಾಗೂ ಅವುಗಳಿಗೆ ನೀಡಿದ ಉತ್ತರಗಳ ಕಡತ

11. ವಿಶಿಷ್ಟ ಸಾಧನೆಗಳು

12. ಬೆಳೆ ಉತ್ಪಾದನಾ ಕಾರ್ಯಕ್ರಮ

13. ರಿಯಾಯಿತಿ ಸೌಲಭ್ಯ ವಿತರಣಾ ವಹಿ

14.ನೀರಾವರಿ ಮೂಲವಾರು ಬೆಳೆ ಯೋಜನೆ ಮತ್ತು ಪ್ರಗತಿ

15. ನಗದು ಪುಸ್ತಕ – (ದೈನಂದಿನ ಆಧಾರದಲ್ಲಿ ಬ್ಯಾಂಕಿಗೆ ಹಣ ಜಮಾ ಕಾರ್ಯಕ್ಕೆ ಹೊಂದಾಣಿಕೆ ಇರಬೇಕು)

16.ಎರಡು ಪ್ರತ್ಯೇಕ (ಸೇವಾಶುಲ್ಕ ಮತ್ತು ಮಾರಾಟ ಬಾಬ್ತು ಕುರಿತು) ಬ್ಯಾಂಕ್ ಖಾತೆಗಳ ಲೆಕ್ಕ ಪುಸ್ತಕಗಳು (ಬ್ಯಾಂಕ್ ಗಳು ನೀಡಿದ್ದು ಮಾತ್ರ)

17. ದಾಸ್ತಾನು ವಹಿ

18. ಮೊಳಕೆ ಪರೀಕ್ಷೆವಹಿ

19. ಮಣ್ಣು ಪರೀಕ್ಷೆವಹಿ

20. ಬೆಳೆ ಕಟಾವು ಪ್ರಯೋಗಗಳ ವಿವರಗಳು

21. ಪ್ರಾತ್ಯಕ್ಷಿಕೆ ವಹಿ

22. ಬೆಳೆ ಕ್ಷೇತ್ರ (ಬೆಳೆ ಪತ್ರಿಕೆ ವಹಿ)

23. ವಿಶಿಷ್ಟ ಸಾಧನೆಗಳು

## ಅನುಬಂಧ-1

<table>
<tr><td colspan="1">ಕರ್ನಾಟಕ ಸರ್ಕಾರ<br>ರೈತ ಸಂಪರ್ಕ ಕೇಂದ್ರ<br>ಕೃಷಿ ಸಲಹಾ ಚೀಟಿ<br>ಕ್ರ.ಸಂ ದಿ:<br>ರೈತರ ವಿಳಾಸ<br>ಶ್ರೀ/ಶ್ರೀಮತಿ---------------------<br>ಗ್ರಾಮ--------------------------<br>ಗ್ರಾ.ಪಂ.------------------------</td><td colspan="2">ಕರ್ನಾಟಕ ಸರ್ಕಾರ<br>ಕರ್ನಾಟಕ ರಾಜ್ಯ ಕೃಷಿ ಇಲಾಖೆ<br>ಜಿಲ್ಲಾ ಪಂಚಾಯತ್<br>ರೈತ ಸಂಪರ್ಕ ಕೇಂದ್ರ ------------ ತಾಲ್ಲೂಕು<br>ಕೃಷಿ ಸಲಹಾ ಚೀಟಿ<br>ಕ್ರ.ಸಂ: ದಿನಾಂಕ:<br>ರೈತರ ವಿಳಾಸ<br>ಶ್ರೀ/ಶ್ರೀಮತಿ -------------------------<br>ಗ್ರಾಮ --------------------------------<br>ಗ್ರಾ.ಪಂ ------------------------------</td></tr>
<tr><td rowspan="2">ಸಲಹೆಗಳು (ಸಂಕ್ಷಿಪ್ತವಾಗಿ)<br><br>ರೈತರ ರುಜು ಕೃಷಿ ಅಧಿಕಾರಿ</td><td>ಅ.ಸಂ.</td><td>ಸಲಹೆಗಳು</td></tr>
<tr><td></td><td>ಕೃಷಿ ಅಧಿಕಾರಿ</td></tr>
</table>

## ಅನುಬಂಧ-2

ಮಹತ್ವದ ಸಂದೇಶಗಳು

ಚಾಲ್ತಿ ಪಕ್ಷ------------------------ರಿಂದ-------------------------- ರವರೆಗೆ

| ಕ್ರ. ಸಂ | ಬೆಳೆ | ಸಂದೇಶ |
|---|---|---|
| 1 | | |
| 2 | | |

ಚಾಲ್ತಿಯಲ್ಲಿರುವ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಸಾಮಾನ್ಯ ಸಂದೇಶಗಳು

1. ----------------------------------------------------

2.______________________________________

ನಿನ್ನೆಯ ಪೇಟೆ ಧಾರಣೆಗಳು________________________________ ಮಾರುಕಟ್ಟೆ

| ಅ.ಸಂ | ಸರಕು | ದರ ರೂ. ಕ್ವಿಂಟಾಲ್ ಗೆ |
|---|---|---|
| 1 | | |
| 2 | | |

## ಅನುಬಂಧ-4

ರೈತ ಸಂಪರ್ಕ ಕೇಂದ್ರಗಳ ಚಟುವಟಿಕೆಗಳ ಪ್ರಗತಿ ವರದಿ

2020-21 ನೇ ಸಾಲಿನ ________ಮಾಹೆಯ ಅಂತ್ಯದ ವರದಿ

( ದಿನಾಂಕ: 01.04.2020 ರ -----ಮಾಹೆಯ ಅಂತ್ಯದವರೆಗಿನ ಸಂಚಿತ ವರದಿ)

| ಕ್ರ.ಸಂ. | ತಾಲ್ಲೂಕು | ಸಂದರ್ಶಿಸಿದ ರೈತರ ಸಂಖ್ಯೆ | ಸಲಹೆ ಪಡೆದ ರೈತರ ಸಂಖ್ಯೆ | ಬೀಜ ಪಡೆದ ರೈತರ ಸಂಖ್ಯೆ | ಸಸ್ಯ ಸಂರಕ್ಷಣಾ ಔಷಧಿ ಪಡೆದ ರೈತರ ಸಂಖ್ಯೆ | ಕೃಷಿ ಉಪಕರಣ ಪಡೆದ ರೈತರ ಸಂಖ್ಯೆ | ಸಸ್ಯ ಸಂರಕ್ಷಣಾ ಔಷಧಿ ಸಿಂಪರಣಾ ಉಪಕರಣ ಪಡೆದ ರೈತರ ಸಂಖ್ಯೆ | ಇತರೆ ಉದ್ದೇಶಗಳಿ ಗಾಗಿ ಭೇಟಿ ನೀಡಿದ ರೈತರ ಸಂಖ್ಯೆ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |
| ಒಟ್ಟು | | | | | | | | |
| | | | | | | | | |

**ಜಿಲ್ಲೆ:**

<table>
<tr><td colspan="7">ಸೇವಾ ಶುಲ್ಕ ಸಂಗ್ರಹಣಾ ವಿವರ</td><td rowspan="3">ಒಟ್ಟು ಸಂಗ್ರಹಿಸಲಾದ ಸೇವಾ ಶುಲ್ಕ ರೂ.ಗಳಲ್ಲಿ</td><td rowspan="3">ಷರಾ</td></tr>
<tr><td colspan="2">ಮಣ್ಣು ಮಾದರಿ ಪರೀಕ್ಷೆ</td><td colspan="2">ಬೀಜ ಪರೀಕ್ಷೆ</td><td colspan="2">ಬೀಜ ಮಾರಾಟ</td><td>ಇತರೆ ಬಾಬ್ತು</td></tr>
<tr><td>ಮಣ್ಣು ಮಾದರಿಗಳ ಸಂಖ್ಯೆ</td><td>ಸೇವಾ ಶುಲ್ಕ ರೂ.ಗಳಲ್ಲಿ</td><td>ಮಾದರಿಗಳ ಸಂಖ್ಯೆ</td><td>ಸೇವಾ ಶುಲ್ಕ ರೂ.ಗಳಲ್ಲಿ</td><td>ಪ್ರಮಾಣ ಕ್ವಿ.ಗಳಲ್ಲಿ</td><td>ಸೇವಾ ಶುಲ್ಕ ರೂ.ಗಳಲ್ಲಿ</td><td>ಸೇವಾ ಶುಲ್ಕ ರೂ.ಗಳಲ್ಲಿ</td></tr>
<tr><td>1</td><td>2</td><td>3</td><td>4</td><td>5</td><td>6</td><td>7</td><td>8</td><td>9</td></tr>
<tr><td></td><td></td><td></td><td></td><td></td><td></td><td></td><td></td><td></td></tr>
<tr><td></td><td></td><td></td><td></td><td></td><td></td><td></td><td></td><td></td></tr>
</table>

**ರೈತ ಸಂಪರ್ಕ ಕೇಂದ್ರಗಳಿಗೆ ವಿದ್ಯಾರ್ಥಿಗಳ ನಿಯೋಜನೆ(ಯೋಜನೆ)**

**ಲೆಕ್ಕ ಶೀರ್ಷಿಕೆ: 2401-00-109-0-21, ಉಪ ಲೆಕ್ಕ ಶೀರ್ಷಿಕೆ:059**

2013-14 ನೇ ಸಾಲಿನಿಂದ ರೈತ ಸಂಪರ್ಕ ಕೇಂದ್ರಗಳಿಗೆ ವಿದ್ಯಾರ್ಥಿಗಳ ನಿಯೋಜನೆ ಕಾರ್ಯಕ್ರಮವನ್ನು ರಾಜ್ಯ ವಲಯದಲ್ಲಿ ಪ್ರಾರಂಭಿಸಲಾಗಿರುತ್ತದೆ. **2021-22**ನೇ ಸಾಲಿನಲ್ಲಿ ಸಹ ಲೆಕ್ಕ ಶೀರ್ಷಿಕೆ**: 2401-00-109-0-21,** ಉಪ ಲೆಕ್ಕ ಶೀರ್ಷಿಕೆ**:059** ರೂ. **100.00**ಲಕ್ಷಗಳ ಅನುದಾನವನ್ನು ಕಲ್ಪಿಸಲಾಗಿದೆ. ಕೃಷಿ, ತೋಟಗಾರಿಕೆ ಮತ್ತು ಪಶು ಸಂಗೋಪನೆ ವಿಶ್ವವಿದ್ಯಾಲಯದ ಅಂತಿಮ ವರ್ಷದ **(RAWE** ಕಾರ್ಯಕ್ರಮದ**)** ವಿದ್ಯಾರ್ಥಿಗಳನ್ನು ಕನಿಷ್ಟ ಪ್ರಾಯೋಗಿಕ ಕೌಶಲ್ಯ , ಕ್ಷೇತ್ರ ಅನುಭವ ಮತ್ತು ಜ್ಞಾನಕ್ಕಾಗಿ ಅವರನ್ನು ರೈತ ಸಂಪರ್ಕ ಕೇಂದ್ರಗಳಿಗೆ ಕನಿಷ್ಟ ಮೂರು ತಿಂಗಳ ಅವಧಿಗೆ ನಿಯೋಜಿಸಲು ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿದೆ. ರೈತ ಸಂಪರ್ಕ ಕೇಂದ್ರಗಳಿಗೆ ಕನಿಷ್ಟ ಮೂರು ತಿಂಗಳ ಅವಧಿಗೆ ನಿಯೋಜಿಸಲಾದ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ರು.3000/- ರಂತೆ ಗೌರವಧನ ನೀಡಲು ಈಯೋಜನೆಯಡಿ ವೆಚ್ಚ ಭರಿಸಲಾಗುವುದು.

ಕೃಷಿ ವಿಶ್ವವಿದ್ಯಾಲಯದವರು ರೈತ ಸಂಪರ್ಕ ಕೇಂದ್ರವಾರು ನಿಯೋಜಿಸಿರುವ ವಿದ್ಯಾರ್ಥಿಗಳ ವಿವರ, ನಿಯೋಜನೆಯ ಅವಧಿ (ದಿನಾಂಕ: ಇಂದ-ರವರೆಗೆ)ಮಾರ್ಗದರ್ಶನ ನೀಡುವ ಪ್ರಾಧ್ಯಾಪಕರ /ವಿಷಯ ತಜ್ಞರ ಹೆಸರು, ದೂರವಾಣಿ ಸಂಖ್ಯೆ ಹಾಗೂ ನಿಯೋಜನೆಯ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಿರುವ ಪಠ್ಯಕ್ರಮ/ನಿಗಧಿಪಡಿಸಿರುವ ಕರ್ತವ್ಯದ ವಿವರಗಳನ್ನು ಒದಗಿಸುತ್ತಾರೆ.

ಎಲ್ಲಾ ಜಂಟಿ ಕೃಷಿ ನಿರ್ದೇಶಕರು ರೈತ ಸಂಪರ್ಕ ಕೇಂದ್ರಗಳಿಗೆ ವಿದ್ಯಾರ್ಥಿಗಳನ್ನು ನಿಯೋಜಿಸಿದಾಗ ಸದರಿಯವರಿಗೆ ಸಹಕರಿಸುವುದು ಹಾಗೂ ಸೌಲಭ್ಯಗಳನ್ನು ಒದಗಿಸುವುದು.

ಅಪರ ಕೃಷಿ ನಿರ್ದೇಶಕರು
ಮಾನವ ಸಂಪನ್ಮೂಲ ಅಭಿವೃದ್ಧಿ

**ರೈತ ಸಂಪರ್ಕ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳ ನಿಯೋಜನೆ**

**ಲೆಕ್ಕ ಶೀರ್ಷಿಕೆ: 2401-00-109-0-21, ಉಪ ಲೆಕ್ಕ ಶೀರ್ಷಿಕೆ: 034**

2014-15 ನೇ ಸಾಲಿನಿಂದ ರೈತ ಸಂಪರ್ಕ ಕೇಂದ್ರಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳ ನಿಯೋಜನೆ ಕಾರ್ಯಕ್ರಮವನ್ನು ರಾಜ್ಯ ವಲಯದಲ್ಲಿ ಪ್ರಾರಂಭಿಸಲಾಗಿರುತ್ತದೆ. 2021-22 ನೇ ಸಾಲಿನಲ್ಲಿ ಸಹ ರೈತ ಸಂಪರ್ಕ ಕೇಂದ್ರಗಳ ದಾಸ್ತಾನು ನಿರ್ವಹಣೆ ಹಾಗೂ ಲೆಕ್ಕ ಪತ್ರ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದಲ್ಲಿ ಮೇಲೆ ಆಯಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರುಗಳು ಇ-ಟೆಂಡರ್ ಮೂಲಕ ಸಿಬ್ಬಂದಿಗಳನ್ನು ಪ್ರತಿ ರೈತ ಸಂಪರ್ಕ ಕೇಂದ್ರಗಳಿಗೆ ಒಬ್ಬರಂತೆ ನಿಯೋಜಿಸಿಕೊಳ್ಳುವುದು.

ಲೆಕ್ಕ ಶೀರ್ಷಿಕೆ: 2401-00-109-0-21, ಉಪ ಲೆಕ್ಕ ಶೀರ್ಷಿಕೆ: 034 ರ ಅನುದಾನದಲ್ಲಿ ವೇತನ ಪಾವತಿ ಮಾಡುವುದು. ನಂತರ ಪೂರ್ಣ ಮಾಹಿತಿಯುಳ್ಳ ವರದಿಯನ್ನು ಕೇಂದ್ರ ಕಛೇರಿಯ ಉಪ ಕೃಷಿ ನಿರ್ದೇಶಕರು (ರೈತ ಸಂಪರ್ಕ ಕೇಂದ್ರ) ಬೆಂಗಳೂರು ಇವರಿಗೆ ಮತ್ತು ಮುಖ್ಯಲೆಕ್ಕಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

**ಅನುಬಂಧ**

2021-22 ನೇ ಸಾಲಿನ ರಾಜ್ಯವಲಯ ಲೆಕ್ಕ ಶೀರ್ಷಿಕೆ : 2401-00-109-0-21, ಉಪ ಶೀರ್ಷಿಕೆ: 034 ಕೃಷಿ ವಿಸ್ತರಣೆ ಮತ್ತು ತರಬೇತಿ ಯೋಜನೆಯಡಿ (ರೈ.ಸಂ.ಕೇ.ಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ದಾಸ್ತಾನು ನಿರ್ವಹಣಾ ಸಿಬ್ಬಂದಿ ನಿಯೋಜನೆ ಗೌರವಧನ ಪಾವತಿಗಾಗಿ) (ಆರ್ಥಿಕ: ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಯ ಹೆಸರು | ವಾರ್ಷಿಕ ಕಾರ್ಯಕ್ರಮ |
|---|---|---|
| 1 | ಬಾಗಲಕೋಟೆ | 45.00 |
| 2 | ಬೆಂಗಳೂರು (ಗ್ರಾ) | 57.00 |
| 3 | ಬೆಂಗಳೂರು (ನ) | 35.00 |
| 4 | ಬೆಳಗಾವಿ | 95.00 |
| 5 | ಬಳ್ಳಾರಿ | 95.00 |
| 6 | ಬೀದರ್ | 85.00 |
| 7 | ವಿಜಯಪುರ | 75.00 |
| 8 | ಚಾಮರಾಜನಗರ | 36.00 |
| 9 | ಚಿಕ್ಕಬಳ್ಳಾಪುರ | 65.00 |
| 10 | ಚಿಕ್ಕಮಗಳೂರು | 87.00 |
| 11 | ಚಿತ್ರದುರ್ಗ | 74.00 |
| 12 | ದಕ್ಷಿಣ ಕನ್ನಡ | 47.00 |
| 13 | ದಾವಣಗೆರೆ | 45.00 |
| 14 | ಧಾರವಾಡ | 45.00 |
| 15 | ಗದಗ | 43.00 |

| | | |
|---|---|---|
| 16 | ಕಲಬುರಗಿ | 85.00 |
| 17 | ಹಾಸನ | 100.00 |
| 18 | ಹಾವೇರಿ | 55.00 |
| 19 | ಕೊಡಗು | 46.00 |
| 20 | ಕೋಲಾರ | 75.00 |
| 21 | ಕೊಪ್ಪಳ | 70.00 |
| 22 | ಮಂಡ್ಯ | 72.00 |
| 23 | ಮೈಸೂರು | 84.00 |
| 24 | ರಾಯಚೂರು | 120.00 |
| 25 | ರಾಮನಗರ | 50.00 |
| 26 | ಶಿವಮೊಗ್ಗ | 85.00 |
| 27 | ತುಮಕೂರು | 130.00 |
| 28 | ಉಡುಪಿ | 20.00 |
| 29 | ಉತ್ತರ ಕನ್ನಡ | 96.00 |
| 30 | ಯಾದಗಿರಿ | 50.00 |
| **ಒಟ್ಟು** | | **2067.00** |

ಷರಾ: 2021-22 ನೇ ಸಾಲಿನಲ್ಲಿ ರೈ.ಸಂ. ಕೇಂದ್ರ ಗಳಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಈಗಾಗಲೇ ನೀಡಿರುವ ಕಾರ್ಯಕ್ರಮದ ಮಿತಿಯೊಳಗೆ ಅನುಷ್ಟಾನಗೊಳಿಸಲು ತಿಳಿಸಿದೆ.

ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಹೊರ ಗುತ್ತಿಗೆ ಸಿಬ್ಬಂದಿಯ ವೇತನ ದರಗಳನ್ನುಕಾರ್ಮಿಕ ಇಲಾಖೆಯ, ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ ರಲ್ಲಿ ಕಛೇರಿ ಸಿಬ್ಬಂದಿ ಮತ್ತು ವಾಹನ ಚಾಲಕರ ಶಿರೋನಾಮೆಯಡಿ , ಈ ಕೆಳಗೆ ಕೋಷ್ಟಕದಲ್ಲಿ ತಿಳಿಸಿರುವ ಕನಿಷ್ಠ ವೇತನ ದರಗಳಂತೆ ಹಾಗೂ ಕನಿಷ್ಠ ಪಾವತಿ ನಿಯಮಗಳನ್ನು ಅನುಸರಿಸಿ ನಿಯಮಾನುಸಾರ ವೇತನ ದರಗಳನ್ನು ನಿಗದಿಪಡಿಸುವಂತೆ ತಿಳಿಸಿದೆ.

| Employment details | | Zone-I | | Zone-II | | Zone-III | | Zone-IV | |
|---|---|---|---|---|---|---|---|---|---|
| Senior Clerk, Cashier, Judgment writer, Store Keeper, Receptionist and similar post | | Per Day | Per Month | Per Day | Per Month | Per Day | Per Month | Per Day | Per Month |
| | Basic | 593.28 | 14021.27 | 513.60 | 13353.59 | 489.14 | 12717.71 | 465.85 | 12112.10 |
| | VDA | 66.28 | 1723.20 | 66.28 | 1723.20 | 66.28 | 1723.20 | 66.28 | 1723.20 |
| | Total | 605.56 | 15744.47 | 579.88 | 15076.79 | 555.42 | 14440.91 | 532.13 | 13835.30 |

ಅಪರ ಕೃಷಿ ನಿರ್ದೇಶಕರು
ಮಾನವ ಸಂಪನ್ಮೂಲ ಅಭಿವೃದ್ಧಿ